ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಜಾಗ ಇಲ್ಲ, ಅಲ್ಲಿ ಹೊಸ ಕಾನೂನು ತಂದು ಅಲ್ಲಿ ಕೈ ಹಾಕುತ್ತೀರಿ. ಎಲ್ಲಿ ಕೈಗೆ ತೆಗೆದುಕೊಳ್ಳಬೇಕೋ ಅಲ್ಲಿ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಅದು ಬೇಡ ಎಂದರೆ the Government will be too happy to have such powers in the Government. Individually I may say that I am not in favour of it. Which Government will give up its powers? ಯಾವುದೇ ಸರ್ಕಾರ ಅಧಿಕಾರವನ್ನು ಬಿಟ್ಟುಕೊಡಲು ತಯಾರಾಗಿರುತ್ತದೆಯೇ? ನೀವೆಲ್ಲಾ ಕೇಳಿದ್ದರಿಂದ, ಇದನ್ನು ತೆಗೆಯಬೇಕು ಎಂದು ನಾವು ಇದನ್ನು ತಂದಿದ್ದೇವೆ. ನಾಳೆ ಕಾಗೋಡು ತಿಮ್ಮಪ್ಪನವರು, ಡಿ.ಆರ್ ಪಾಟೀಲರ ಜೊತೆ ಚರ್ಚೆ ಮಾಡುತ್ತೇವೆ. ನೀವು ಅದಕ್ಕೆ ಏನಾದರೂ ತಿದ್ದುಪಡಿಯನ್ನು ತರಬೇಕು ಎಂದು ಬಯಸಿದರೆ ಅಧಿಕೃತ ತಿದ್ದುಪಡಿಯನ್ನು ತರೋಣ. Nothing wrong in it. I am prepared to accept it.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಉಪಾಧ್ಯಕ್ಷರೇ, ಸಹಕಾರ ಸಚಿವರು ತಂದಿರತಕ್ಕಂಥ ಕೋಆಪರೇಟೀವ್ ಆಡಿಟ್ ಏನಿದೆ, ಅದನ್ನು ರೆಗ್ಯುಲರ್ ಕೋಆಪರೇಟಿವ್ ಡಿಪಾರ್ಟ್‌ಮೆಂಟ್‌ನಲ್ಲಿ ಮರ್ಜ್ ಮಾಡಬೇಕು ಎನ್ನತಕ್ಕಂಥಾದ್ದೇ ಅವರ ಮೂಲವಾದ ಸಲಹೆ ಎಂದು ಕಾಣುತ್ತದೆ. ಹಿಂದೆ ಸಹಾ ಎರಡೂ ಒಟ್ಟಿಗೆ ಕೆಲಸ ಮಾಡಿದ್ದವು. ಹಾಗೆ ಕೆಲಸ ಮಾಡುವಂಥ ಸಂದರ್ಭದಲ್ಲಿ ಅನೇಕ ದೋಷಗಳಾದವು. ಇಲ್ಲಿರತಕ್ಕಂಥ ಎಂ.ಡಿ. ಅಲ್ಲಿಗೆ ಡೆಪ್ಯುಟಿ ರಿಜಿಸ್ಟ್ರಾರ್ ಆಗಿ ಹೋಗುತ್ತಾರೆ. ಅವರು ಮಾಡಿರತಕ್ಕಂಥ ತಪ್ಪನ್ನು ಆಡಿಟ್ ಮಾಡಲು ಡೆಪ್ಯುಟಿ ರಿಜಿಸ್ಟ್ರಾರ್ ಆಗಿ ಬಂದಂಥವರು ಅವರ ಕೈಕೆಳಗೇ ಕೆಲಸ ಮಾಡುತ್ತಿರುತ್ತಾರೆ. ಹೀಗಿರುವಾಗ ಅವರು ಮಾಡಿರತಕ್ಕಂಥ ದೋಷಗಳನ್ನು ಮುಚ್ಚಿ ಹಾಕುವಂಥ ಅವಕಾಶಗಳು ಅನೇಕ ಸಂದರ್ಭಗಳಲ್ಲಿ ಆಗಿದ್ದರಿಂದಲೇ ಇದಕ್ಕೆ ಪ್ರತ್ಯೇಕವಾದಂಥ ಅಸ್ತಿತ್ವ ಇರಬೇಕು, ಅದಕ್ಕೆ ಒಂದು ಇಂಡಿಪೆಂಡೆಂಟ್ ಎಗ್ಸಿಸ್ಟೆನ್ಸ್ ಕೊಡಬೇಕು ಎಂದು ಆಡಿಟ್ ಡಿಪಾರ್ಟ್‌ಮೆಂಟನ್ನು ಸೆಪರೇಟ್ ಮಾಡಿರತಕ್ಕಂಥಾದ್ದು. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಕೂಲಂಕುಷವಾದ ಚರ್ಚೆಯಾಗಬೇಕು.

ಶ್ರೀ ಎಂ.ಸಿ. ನಾಣಯ್ಯ : ನಾಳೆ ಕಾಗೋಡು ತಿಮ್ಮಪ್ಪನವರ ಹತ್ತಿರ, ಡಿ.ಆರ್. ಪಾಟೀಲರ ಹತ್ತಿರ, ನಿಮ್ಮ ಹತ್ತಿರ, ರೆಡ್ಡಿಯವರ ಹತ್ತಿರ ಕುಳಿತು, ಚರ್ಚೆ ಮಾಡಿ ನೀವು ಹೇಳುತ್ತಿರುವಂಥ ತಿದ್ದುಪಡಿಯನ್ನು ಸರ್ಕಾರ ಬೇಕು ಎಂದು ತೀರ್ಮಾನ ಮಾಡಿದರೆ, ಅದನ್ನು ತಂದು ನಿಮ್ಮೆಲ್ಲರ ಒಪ್ಪಿಗೆ ಪಡೆದು ನಾವು ಅದಕ್ಕೆ ಮಂಜೂರಾತಿ ಕೊಟ್ಟರೆ ಆಯಿತಲ್ಲ. ಅದನ್ನು ನಾಳೆ ಮಾಡೋಣ.

ಉಪಾಧ್ಯಕ್ಷರು : ಈ ಬಿಲ್ಲನ್ನು ಮುಂದೂಡಲಾಗಿದೆ.

ನಿಯಮ 69ರ ಮೇರೆಗೆ

ಕಾವೇರಿ ಕಣಿವೆ ಯೋಜನೆಯಡಿ ಬರುವ ಹಾರಂಗಿ, ಹೇಮಾವತಿ, ಕಬಿನಿ, ಕೆ.ಆರ್.ಎಸ್ ಮತ್ತು ಯಗಚಿ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಕಾಮಗಾರಿ.

+ ಶ್ರೀ ಜಿ.ಬಿ. ಶಿವಕುಮಾರ್ (ಕೆರೆಗೋಡು) : ಮಾನ್ಯ ಉಪಾಧ್ಯಕ್ಷರೇ, ಈ ವಿಚಾರವಾಗಿ ಈ ದಿವಸ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಾಗ, ಮಾನ್ಯ ನೀರಾವರಿ ಸಚಿವರು, ಆ ಭಾಗದ ಮೂವರೂ ಶಾಸಕರನ್ನು ಕರೆದು ಪ್ರತ್ಯೇಕ ಸಭೆ ಮಾಡುತ್ತೇನೆಂದು, ಶೂನ್ಯ ವೇಳೆಯಲ್ಲಿ ಮಾಡಿದಂಥ ಪ್ರಸ್ತಾವನೆಗೆ ಉತ್ತರ ಕೊಟ್ಟಿದ್ದಾರೆ. ತಾವು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಸಂತೋಷ. ಆದರೆ ಸಂಬಂಧಪಟ್ಟಂಥ ಸಚಿವರು ಇರಬೇಕು.

4.50 ಪಿ.ಎಂ

ಉಪಾಧ್ಯಕ್ಷರು : ಸಂಬಂಧಪಟ್ಟಿರುವ ಸಚಿವರು ನಂತರ ಬರುತ್ತಾರೆ. ಮಾನ್ಯ ಸಂಸದೀಯ ಸಚಿವರು ಇಲ್ಲಿರುವುದರಿಂದ ತಾವು ಮಾತನಾಡಿ.

ಶ್ರೀ ಜಿ.ಬಿ. ಶಿವಕುಮಾರ್ : ಇವತ್ತು ಬೆಳಿಗ್ಗೆ ಮಾನ್ಯ ನಾಗೇಗೌಡರವರು ಮೂರು ಜಿಲ್ಲೆಯ ಶಾಸಕರನ್ನು ಕರೆದು ಸಭೆ ಮಾಡಿ ನಂತರ ಹೇಳುತ್ತೇನೆಂದು ಹೇಳಿರುವುದರಿಂದ ಪುನಃ ಈ ವಿಚಾರವನ್ನು ಪ್ರಸ್ತಾಪಿಸುವುದು ಬೇಡ ಎಂದು ನನ್ನಗನ್ನಿಸುತ್ತದೆ. ನಾವು ಅವರಿಗೆ ಹೇಮಾವತಿ ಯೋಜನೆ ಪೂರ್ಣ ಫಲಪ್ರದವಾಗಬೇಕಾದರೆ ಆ ಯೋಜನೆಯ ಒರಿಜಿನಲ್ ಕನ್ಸೆಪ್ಟ್ ಜಾರಿಗೆ ತರಬೇಕಾಗಿದೆ. ಏನು ಮಾಡಬೇಕು ಎಂಬ ಬಗ್ಗೆ ನಾವು ಸವಿಸ್ತಾರವಾಗಿ ತಿಳಿಸಬೇಕೆಂದು ಇದ್ದೆವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಲೋಕೋಪಯೋಗಿ ಸಚಿವರು ಆ ಹೆಲಿಕ್ಯಾಪ್ಟರ್ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದರು. ಅದು ಎಲ್ಲಿ ಹೋಯಿತು?

ಉಪಾಧ್ಯಕ್ಷರು : ಎರಡನೇಯದಾಗಿ, ಶ್ರೀಯುತರುಗಳಾದ ಕಾಗೋಡು ತಿಮ್ಮಪ್ಪ, ಮಂಜುನಾಥ್ ಸಿ. ಕುನ್ನೂರ್, ಡಿ.ಬಿ. ಇನಾಮ್‌ದಾರ್, ಯು.ಆರ್. ಸಭಾಪತಿ, ಅವರುಗಳು "ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 1998-99ನೇ ಸಾಲಿನಲ್ಲಿ ಅನುದಾನವನ್ನು ಕಡಿತಗೊಳಿಸಿರುವ ಬಗ್ಗೆ ಪ್ರಸ್ತಾಪಿಸುವುದು".

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಂಸದೀಯ ಸಚಿವರು ಇಲ್ಲಿರುವುದರಿಂದ ಬಹಳ ಪ್ರಾಮುಖ್ಯವಾದ ವಿಚಾರವನ್ನು ಹೇಳುತ್ತಿದ್ದೇನೆ, ಇವತ್ತು ಬೆಳಿಗ್ಗೆ ಈ ವಿಚಾರ ಮಾತನಾಡಬೇಕೆಂದು ಭಾವಿಸಿದ್ದೆ.

ಶ್ರೀ ಜಿ.ಬಿ. ಶಿವಕುಮಾರ್ : ನನ್ನದು ಮತ್ತೊಂದು ವಿಚಾರ ಇದೆ, ತಾವು ಅವಕಾಶ ಮಾಡಿಕೊಟ್ಟರೆ ಮಾತನಾಡುತ್ತೇನೆ. ಏಕೆಂದರೆ ನಿಯಮ 69ರ ಅಡಿಯಲ್ಲಿ ಸಣ್ಣ ಕೈಗಾರಿಕೆಗಳ ಬಗ್ಗೆ ವಿಷಯ ಪ್ರಸ್ತಾಪಿಸಬೇಕಾಗಿತ್ತು. ಅಲ್ಲದೆ ಮಾನ್ಯ ಮೋಹಿದ್ದೀನ್ ರವರು ಇಲ್ಲಿರುವುದರಿಂದ ನನಗೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು : ಆಯಿತು. ಮಾನ್ಯ ವಾಟಾಳ್ ನಾಗರಾಜ್‌ರವರು ಈಗ ಮಾತನಾಡಲಿ, ನಂತರ ತಾವು ಮಾತನಾಡಿ.